ಕರ್ನಾಟಕಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ 19 ಇಎಸ್‌ಟಿ(10) 2025

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ: 13-05-2025

## ಪರಿಚಲನಾದೇಶ

ವಿಷಯ: ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕಾರ್ಯನಿರ್ವಹಿಸುತ್ತಿರುವ ಗ್ರಂಥಪಾಲಕರು (ಆಯ್ಕೆ ಶ್ರೇಣಿ) 7ನೇ ಎಐಸಿಟಿಇ ವೇತನಶ್ರೇಣಿ ರೂ. 79800-211500 ಲೆವೆಲ್-12 ರಿಂದ ರೂ.131400-217100 ಲೆವೆಲ್-13A1 ಸಹ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಇಡಿ 54 ಡಿಟಿಇ 2025 ದಿನಾಂಕ:03-05-2025.

******

ಉಲ್ಲೇಖದ ಆದೇಶದದಲ್ಲಿ ಹೆಸರಿಸಲಾದ, ಶ್ರೀ. ಸತೀಶ. ಎಂ. ವಿ ಗ್ರಂಥಪಾಲಕರು (ಆಯ್ಕೆ ಶ್ರೇಣಿ) ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಕೆ ಆರ್ ಪೇಟೆ ಹಾಗೂ ಶ್ರೀ. ಪರಮೇಶ್. ಎಸ್ ಗ್ರಂಥಪಾಲಕರು (ಆಯ್ಕೆ ಶ್ರೇಣಿ) ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ರಾಮನಗರ ಇವರುಗಳಿಗೆ 7ನೇ ಎಐಸಿಟಿಇ ವೇತನಶ್ರೇಣಿ ರೂ. 79800-211500 ಲೆವೆಲ್-12 ರಿಂದ ರೂ.131400-217100 ಲೆವೆಲ್-13A1 ಕ್ಕೆ ಪದೋನ್ನತಿ ನೀಡಿರುವ ಸರ್ಕಾರದ ಆದೇಶವನ್ನು ಸಂಬಂಧಪಟ್ಟ ಗ್ರಂಥಪಾಲಕರುಗಳಿಗೆ ಹಾಗೂ ಸಂಬಂಧಪಟ್ಟ ಪ್ರಾಂಶುಪಾಲರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಪರಿಚಯಿಸಲಾಗಿದೆ.

Digitally signed by
Prasanna H
Date: 15-05-2025
13:27:44

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ,

ಇವರಿಗೆ:-

1. ಸಂಬಂಧಪಟ್ಟ ಪ್ರಾಂಶುಪಾಲರುಗಳಿಗೆ - ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ;
2. ಸಂಬಂಧಪಟ್ಟ ಅಧ್ಯಾಪಾಕರುಗಳು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ (ಪ್ರಾಂಶುಪಾಲರ ಮುಖಾಂತರ)
3. ನೋಡಲ್ ಅಧಿಕಾರಿ, ಇ-ಆಡಳಿತ, ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು (ವೆಬ್‌ಸೈಟ್‌ನಲ್ಲಿ ಅಳವಡಿಸಲು)

ಪ್ರತಿ:-

1. ಮಹಾಲೇಖಪಾಲರು, ಎ&ಇ, (AAOGE-XI) ಬೆಂಗಳೂರು;
2. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ(ತಾಂತ್ರಿಕ), ಬಹುಮಹಡಿ ಕಟ್ಟಡ, ಬೆಂಗಳೂರು;
3. ಆಪ್ತ ಶಾಖೆ, ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
4. ಆಪ್ತ ಶಾಖೆ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು;
5. ಹೆಚ್ಚುವರಿ ಪ್ರತಿ ಕಡತಕ್ಕೆ.

1004522777/25

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಂಥಪಾಲಕರು (ಆಯ್ಕೆ ಶ್ರೇಣಿ) ಗಳಿಗೆ 7 ನೇ ಎಐಸಿಟಿಇ ವೇತನ ಶ್ರೇಣಿ ರೂ. 79800-211500 ಲೆವೆಲ್-12 ರಿಂದ ರೂ. 131400-217100 ಸಹ ಪ್ರಾಧ್ಯಾಪಕರ ಲೆವೆಲ್-13A1 ಗೆ ಪದೋನ್ನತಿ ನೀಡುವ ಬಗ್ಗೆ.

**ಓದಲಾಗಿದೆ:-**

1. ಸರ್ಕಾರದ ಆದೇಶ ಸಂಖ್ಯೆ: ಇಡಿ 12 ಡಿಟಿಇ 2019, ದಿನಾಂಕ:24.03.2020.
2. ಸರ್ಕಾರದ ಪತ್ರ ಸಂಖ್ಯೆ: ಇಡಿ 86 ಡಿಟಿಇ 2023, ದಿನಾಂಕ:07.10.2023.
3. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರ ಏಕ ಕಡತ ಸಂಖ್ಯೆ: DTE-ADMI0EST(10)/19/2025.

ತಾಂತ್ರಿಕ ಶಿಕ್ಷಣ ಇಲಾಖೆ
ನಿರ್ದೇಶಕರ ಆಪ್ತ ಶಾಖೆ
ಸಂಖ್ಯೆ: 86
ದಿನಾಂಕ: 14/5/25

**ಪ್ರಸ್ತಾವನೆ:-**

ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರುಗಳಿಗೆ 7ನೇ ಎಐಸಿಟಿಇ ವೇತನವನ್ನು ದಿನಾಂಕ: 01.01.2016ರಿಂದ ಅನ್ವಯಿಸುವಂತೆ ವಿಸ್ತರಿಸಿ ಆದೇಶಿಸಲಾಗಿದೆ.

ಮೇಲೆ ಕ್ರಮಾಂಕ (2) ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ಎಐಸಿಟಿಇ ಅಧಿಸೂಚನೆ ಸಂ: F.No. 61-1/RIFD/7thCPC/2016-17, ದಿನಾಂಕ:01.03.2019 ರಲ್ಲಿ ನೇಮಕಾತಿ ಮುಂಬಡ್ತಿಗೆ ನಿಗದಿಪಡಿಸಲಾಗಿರುವ ಎಲ್ಲಾ ನಿಯಮಾವಳಿಗಳನ್ನು ಅಳವಡಿಸಿಕೊಂಡು ಹಾಗೂ ಎಐಸಿಟಿಇ ಮತ್ತು ಯುಜಿಸಿ 2010 ಮತ್ತು 2018ರ ಆದೇಶ ಸಂ:-F.1-2/2017(EC/PS) ದಿನಾಂಕ18.07.2018 UGC REGULATIONS ಮುಂಬಡ್ತಿಗೆ ನಿಗಧಿಪಡಿಸಲಾಗಿರುವ ಎಲ್ಲಾ ಮಾನದಂಡಗಳನ್ನು ಅಳವಡಿಸಿಕೊಂಡು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ 7ನೇ ಎಐಸಿಟಿಇ ವೇತನ ಶ್ರೇಣಿಯಲ್ಲಿ ಪದೋನ್ನತಿ ನೀಡುವ ಪ್ರಸ್ತಾವನೆಗಳನ್ನು ಪರಿಶೀಲಿಸಲು ಪ್ರತ್ಯೇಕ ಸ್ಕ್ರಾನೀಕರಣ ಸಮಿತಿಯನ್ನು ರಚಿಸುವ ಅಧಿಕಾರವನ್ನು ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ರವರಿಗೆ ಪ್ರತ್ಯಾಯೋಜಿಸಲಾಗಿದೆ.

ಅದರನ್ವಯ, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ವಿಷಯ ತಜ್ಞರುಗಳನ್ನೊಳಗೊಂಡ ಸ್ಕ್ರಾನೀಕರಣ ಸಮಿತಿಯು ದಿನಾಂಕ:20.11.2024ರಂದು ಸಭೆ ಸೇರಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಂಥಪಾಲಕರು (ಆಯ್ಕೆ ಶ್ರೇಣಿ)ಗಳಾದ ಶ್ರೀ ಸತೀಶ ಎಂ.ವಿ. ಗ್ರಂಥಪಾಲಕರು (ಆಯ್ಕೆ ಶ್ರೇಣಿ), ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕೆ.ಆರ್.ಪೇಟೆ ಹಾಗೂ ಶ್ರೀ ಪರಮೇಶ್ ಎಸ್., ಗ್ರಂಥಪಾಲಕರು (ಆಯ್ಕೆ ಶ್ರೇಣಿ), ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಮನಗರ ಇವರುಗಳಿಗೆ 7ನೇ ಎಐಸಿಟಿಇ ವೇತನ ಶ್ರೇಣಿ ರೂ. 79800-211500 ಲೆವೆಲ್-12 ರಿಂದ ರೂ. 131400-217100, ಲೆವೆಲ್-13A1 ಗಳಿಗೆ ಪದೋನ್ನತಿ ಹೊಂದಲು ನಿಯಮಾನುಸಾರ ಅರ್ಹತೆ ಹೊಂದಿರುವ ಬಗ್ಗೆ ಪರಿಶೀಲಿಸಿ, ಪದೋನ್ನತಿ ಮಂಜೂರು ಮಾಡಲು ಶಿಫಾರಸ್ಸು ಮಾಡಲಾಗಿತ್ತು.

EST(10)

ಅದರಂತೆ, ಶ್ರೀ ಸತೀಶ ಎಂ.ವಿ. ಗ್ರಂಥಪಾಲಕರು (ಆಯ್ಕೆ ಶ್ರೇಣಿ), ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕೆ.ಆರ್.ಪೇಟೆ ಹಾಗೂ ಶ್ರೀ ಪರಮೇಶ್ ಎಸ್., ಗ್ರಂಥಪಾಲಕರು (ಆಯ್ಕೆ ಶ್ರೇಣಿ), ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಮನಗರ ಇವರುಗಳಿಗೆ 7ನೇ ಎಐಸಿಟಿಇ ವೇತನ ಶ್ರೇಣಿ ರೂ. 79800-211500 ಲೆವೆಲ್-12 ರಿಂದ ಸಹ ಪ್ರಾಧ್ಯಾಪಕರ ರೂ. 131400-217100, ಲೆವೆಲ್-13A1 ಗಳಿಗೆ ಇವರು ಮುಂಬಡ್ತಿಗೆ ಅರ್ಹತೆ ಪಡೆದ ದಿನಾಂಕದಿಂದ ಅನ್ವಯವಾಗುವಂತೆ ಪದೋನ್ನತಿ ನೀಡುವಂತೆ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರು ಕೋರಿರುತ್ತಾರೆ.

ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಶ್ರೀ ಸತೀಶ ಎಂ.ವಿ. ಗ್ರಂಥಪಾಲಕರು (ಆಯ್ಕೆ ಶ್ರೇಣಿ), ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕೆ.ಆರ್.ಪೇಟೆ ಹಾಗೂ ಶ್ರೀ ಪರಮೇಶ್ ಎಸ್., ಗ್ರಂಥಪಾಲಕರು (ಆಯ್ಕೆ ಶ್ರೇಣಿ), ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಮನಗರ ಇವರುಗಳಿಗೆ 7ನೇ ಎಐಸಿಟಿಇ ವೇತನ ಶ್ರೇಣಿ ರೂ. 79800-211500 ಲೆವೆಲ್-12 ರಿಂದ ಸಹ ಪ್ರಾಧ್ಯಾಪಕರ ರೂ. 131400-217100, ಲೆವೆಲ್-13A1 ರಲ್ಲಿ ಪದೋನ್ನತಿ ನೀಡಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಇಡಿ 54 ಡಿಟಿಇ 2025**
**ಬೆಂಗಳೂರು, ದಿನಾಂಕ: 03ನೇ ಮೇ 2025.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಶ್ರೀ ಸತೀಶ ಎಂ.ವಿ. ಗ್ರಂಥಪಾಲಕರು (ಆಯ್ಕೆ ಶ್ರೇಣಿ), ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕೆ.ಆರ್.ಪೇಟೆ ಹಾಗೂ ಶ್ರೀ ಪರಮೇಶ್ ಎಸ್., ಗ್ರಂಥಪಾಲಕರು (ಆಯ್ಕೆ ಶ್ರೇಣಿ), ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಮನಗರ ಇವರುಗಳಿಗೆ ಕೆಳಕಂಡ ಷರತ್ತಿಗೊಳಪಟ್ಟು 7 ನೇ ಎಐಸಿಟಿಇ ವೇತನ ಶ್ರೇಣಿ ರೂ. 79800-211500 ಲೆವೆಲ್-12 ರಿಂದ ರೂ. 131400-217100 ಸಹಾಯಕ ಪ್ರಾಧ್ಯಾಪಕರ ಲೆವೆಲ್-13A1 ರಲ್ಲಿ ಪದೋನ್ನತಿ ನೀಡಿ ಆದೇಶಿಸಿದೆ.

| ಕ್ರ.ಸಂ. | ಹೆಸರು, ಪದನಾಮ & ಕಾರ್ಯನಿರ್ವಹಿಸುತ್ತಿರುವ ಸಂಸ್ಥೆ | ಸೇವೆಗೆ ಸೇರಿದ ದಿನಾಂಕ | ಮುಂಬಡ್ತಿಗೆ ಅರ್ಹತೆ ಪಡೆದ ದಿನಾಂಕ |
|---|---|---|---|
| 01 | ಶ್ರೀ ಸತೀಶ ಎಂ.ವಿ. ಗ್ರಂಥಪಾಲಕರು (ಆಯ್ಕೆ ಶ್ರೇಣಿ), ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಕೆ.ಆರ್.ಪೇಟೆ. | 04.11.2010 | 04.11.2024 |
| 02 | ಶ್ರೀ ಪರಮೇಶ್ ಎಸ್., ಗ್ರಂಥಪಾಲಕರು (ಆಯ್ಕೆ ಶ್ರೇಣಿ), ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ರಾಮನಗರ | 08.11.2010 | 08.11.2024 |

**ಷರತ್ತುಗಳು:**

i. 2019 ಮತ್ತು 2020ರ 7ನೇ ಎಐಸಿಟಿಇ ವೇತನ ಶ್ರೇಣಿಗಳಲ್ಲಿನ ಮಂಜೂರಾತಿಯು ಸರ್ಕಾರದ ಮಾರ್ಗಸೂಚಿ/ಆದೇಶಗಳಲ್ಲಿನ ನಿಬಂಧನೆಗೊಳಪಟ್ಟಿರುತ್ತದೆ. ಸದರಿ ವೇತನ ಶ್ರೇಣಿಗಳಲ್ಲಿ ನಿಗದಿಪಡಿಸಿರುವ ಎಲ್ಲಾ ಅಂಶಗಳ ಆಧಾರದ ಮೇಲೆ ಅರ್ಹ ಸಹಾಯಕ ಪ್ರಾಧ್ಯಾಪಕರುಗಳ ಮುಂಬಡ್ತಿ

ಮಂಜೂರಾತಿಗೆ ಸಮಿತಿಯು ಮಾಡಿರುವ ಶಿಫಾರಸ್ಸನ್ನು ಆಧರಿಸಿ ಈ ಆದೇಶವನ್ನು ಹೊರಡಿಸಲಾಗಿದೆ.

ii. ಎಐಸಿಟಿಇ/ಯುಜಿಸಿ/ಸರ್ಕಾರ/ಇಲಾಖೆ ಕಾಲಕಾಲಕ್ಕೆ ಹೊರಡಿಸುವ ಆದೇಶ/ ಸುತ್ತೋಲೆ/ ಪತ್ರಗಳಲ್ಲಿ ನಿಗದಿಪಡಿಸುವ ಷರತ್ತು/ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

iii. ಸದರಿಯವರಿಗೆ ಪದೋನ್ನತಿಗೆ ಅರ್ಹತೆ ಹೊಂದಿದ ದಿನಾಂಕದಿಂದ ಅರ್ಹತಾ ದಿನಾಂಕವನ್ನು ಪರಿಗಣಿಸುವುದು ಹಾಗೂ ಸದರಿ ಪದೋನ್ನತಿಯ ಆರ್ಥಿಕ ಸೌಲಭ್ಯವನ್ನು **ಭವಿಷ್ಯವರ್ತಿಯಾಗಿ ಅಂದರೆ, ಈ ಆದೇಶವನ್ನು ಹೊರಡಿಸಿದ ದಿನಾಂಕದಿಂದ** ಅನ್ವಯವಾಗುವಂತೆ ಜಾರಿಗೊಳಿಸುವುದು.

iv. ಈ ವೃತ್ತಿ ಪದೋನ್ನತಿಯನ್ನು ಸೇವಾ ಜೇಷ್ಠತೆಗೆ ಪರಿಗಣಿಸಲು ಅವಕಾಶವಿರುವುದಿಲ್ಲ.

v. ಅರ್ಹ ಸಹಾಯಕ ಪ್ರಾಧ್ಯಾಪಕರುಗಳು ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಯಾವುದೇ ತಪ್ಪು ಮಾಹಿತಿಗಳನ್ನು ಒದಗಿಸಿರುವುದು ಕಂಡುಬಂದಲ್ಲಿ ಸಂಬಂಧಿಸಿದ ಸಹಾಯಕ ಪ್ರಾಧ್ಯಾಪಕರುಗಳ ವಿವಿಧ ಹಂತದ ಮುಂಬಡ್ತಿ ಮಂಜೂರಾತಿಯನ್ನು ಯಾವುದೇ ಮುನ್ಸೂಚನೆ ನೀಡದೇ ಹಿಂಪಡೆಯಲಾಗುವುದು ಹಾಗೂ ತಪ್ಪು ಮಾಹಿತಿ ಒದಗಿಸಿದ ಸಹಾಯಕ ಪ್ರಾಧ್ಯಾಪಕರುಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು.

vi. ಶಿಫಾರಸ್ಸು ಮಾಡಲಾಗಿರುವ ಅನುಬಂಧದಲ್ಲಿರುವ ಸಹಾಯಕ ಪ್ರಾಧ್ಯಾಪಕರುಗಳು ಸಲ್ಲಿಸಲಾಗಿರುವ ದಾಖಲೆಗಳಲ್ಲಿ ವ್ಯತ್ಯಾಸಗಳು, ಅಸಂಗತಗಳು, ಕಂಡುಬಂದಲ್ಲಿ ಮುಂದಿನ ದಿನಗಳಲ್ಲಿ ಅದರ ಸಾಧಕ-ಬಾಧಕಗಳಿಗೆ ಸಂಪೂರ್ಣವಾಗಿ ಸಂಬಂಧಪಟ್ಟ ಸಹಾಯಕ ಪ್ರಾಧ್ಯಾಪಕರುಗಳೇ ವೈಯಕ್ತಿಕವಾಗಿ ಹೊಣೆಗಾರರಾಗಿರುತ್ತಾರೆ.

vii. ಸ್ಥಳೀಯ/ಮಹಾಲೇಖಪಾಲರ ಲೆಕ್ಕಪರಿಶೋಧನೆಗೆ ಒಳಪಡಿಸಿದಾಗ, ಯಾವುದೇ ಅಸಂಗತಗಳು ಕಂಡು ಬಂದಲ್ಲಿ ಮರು ಪರಿಶೀಲಿಸುವ ಮತ್ತು ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳುವ ಷರತ್ತಿಗೊಳಪಟ್ಟಿರುತ್ತದೆ.

viii. ಸದರಿ ಸಹಾಯಕ ಪ್ರಾಧ್ಯಾಪಕರುಗಳಿಗೆ ಪದೋನ್ನತಿ ವೇತನ ನಿಗದಿಯಲ್ಲಿ ಸರ್ಕಾರ /ಎಐಸಿಟಿಇ ನಿಯಮಗಳನ್ವಯ ಯಾವುದಾದರೂ ಲೋಪದೋಷಗಳು ಕಂಡುಬಂದಲ್ಲಿ ಅಂತಹ ಮುಂಬಡ್ತಿ ಆದೇಶವನ್ನು ರದ್ದುಪಡಿಸಿ ವೇತನ ವ್ಯತ್ಯಾಸದ ಮೊತ್ತವನ್ನು ವಸೂಲು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ix. ಸಹಾಯಕ ಪ್ರಾಧ್ಯಾಪಕರುಗಳಿಗೆ ಮುಂಬಡ್ತಿ ಮಂಜೂರಾತಿಯ ವಿವರಗಳನ್ನು ಸಂಬಂಧಪಟ್ಟ ಅಧಿಕಾರಿಗಳ ಸೇವಾ ಪುಸ್ತಕದಲ್ಲಿ ನಮೂದಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಎನ್. ಕುಮಾರ್ 03/05/2025

**(ಎನ್ ಕುಮಾರ್)**
ಸರ್ಕಾರದ ಉಪ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ
(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ (ಎ&ಇ), ಬೆಂಗಳೂರು.
2. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಸಂಬಂಧಪಟ್ಟ ಗ್ರಂಥಪಾಲಕರಿಗೆ (ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆರವರ ಕಛೇರಿಯ ಮೂಲಕ)

**ಪ್ರತಿ:**

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ
3. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.